ಸತ್ಯಾಸತ್ಯತೆಯ ಪರಿಶೀನೆಗಾಗಿ ರಚಿಸಲಾದ ಜಾಯಿಂಟ್ ಸದನ ಸಮಿತಿಯ ವರದಿಯನ್ನು ಒಪ್ಪಿಸಲು ಈ ತಿಂಗಳ ಅಂತಿಮದವರೆಗೆ ಕಾಲವನ್ನು ವಿಸ್ತರಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಕಾಲವನ್ನು ವಿಸ್ತರಿಸಲಾಯಿತು)

ಅಧ್ಯಕ್ಷರು : ಈಗ ಸಭೆಯನ್ನು ಮಧ್ಯಾಹ್ನ 2.30ರವರೆಗೆ ಮುಂದೂಡಿದ್ದೇನೆ.

(ಸದನವು ಮಧ್ಯಾಹ್ನ 1.00ಗಂಟೆ 00.02ನಿಮಿಷಕ್ಕೆ ಮುಂದೂಡಲ್ಪಟ್ಟಿತು)

(ಸದನವು 2ಗಂಟೆ 55ನಿಮಿಷಕ್ಕೆ ಸಮಾವೇಶಗೊಂಡಿತು)

(ಶ್ರೀ ಅಂಜನಾಮೂರ್ತಿ (ಉಪಾಧ್ಯಕ್ಷರು) ಅಧ್ಯಕ್ಷಪೀಠವನ್ನು ಅಲಂಕರಿಸಿದರು.)

ಉಪಾಧ್ಯಕ್ಷರ ಅನುಮತಿ ಕೋರಿ ಪ್ರಸ್ತಾಪಿಸಲಾದ ವಿಷಯ.

ವಿಷಯ : ರೈತರ ಬೆಳೆಗೆ ಸರಿಯೂದ ಬೆಲೆ ಸಿಗದಿರುವ ಹಾಗೂ ಕೃಷಿ ವಸ್ತುಗಳ ಬೆಲೆ ಹೆಚ್ಚಿರುವ ಬಗ್ಗೆ.

*ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷರೇ, ನಾನು ಅತ್ಯಂತ ಮಹತ್ತರವಾದಂಥ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಬೆಳಿಗ್ಗೆ ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದ್ದೆ. ಅವರು ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದರು. ತಮ್ಮನ್ನೂ ಕೂಡ ವಿನಂತಿಸಿದ್ದೆ, ತಾವು ಕೂಡ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದರು. ತಮ್ಮನ್ನೂ ಕೂಡ ವಿನಂತಿಸಿದ್ದೆ, ತಾವು ಕೂಡ ಅವಕಾಶ ಮಾಡಿಕೊಡುತ್ತೇನೆನ್ನುವ ಭರವಸೆಯನ್ನು ಕೊಟ್ಟಿದ್ದಿರಿ. ಮಾನ್ಯ ಅಧ್ಯಕ್ಷರೇ,ಈ ಸದನದಲ್ಲಿ ಕಳೆದ ಒಂದೂವರೆ ತಿಂಗಳಿಂದ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಆದರೆ ಅತಿ ಮುಖ್ಯವಾದಂಥ ವಿಚಾರ ಅಂದರೆ ಇಂದು ವ್ಯವಸಾಯಗಾರನ, ರೈತನ ಪರಿಸ್ಥಿತಿ ಬಗ್ಗೆ ಇಲ್ಲಿ ಹೆಚ್ಚಿಗೆ ಪ್ರಸ್ತಾಪ ಮಾಡಲು ಅವಕಾಶ ಸಿಗಲಿಲ್ಲ. ಕಾರಣವೇನೆಂದರೆ ಆ ಸಂಬಂಧಪಟ್ಟ ಇಲಾಖೆಗಳ ನಾವು ಬೇಡಿಕೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸತಕ್ಕಂಥ ಒಂದು ಅವಕಾಶ ಸಿಗಲಿಲ್ಲ. ಆದ್ದರಿಂದ ಇವತ್ತಿನದಿವಸ ವಿಶೇಷವಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ನಿಂತಿದ್ದೇನೆ. ಇವತ್ತು ನನ್ನ ಮನಸ್ಸಿಗೆ ಒಂದು ತರಹ ಜಿಗುಪ್ಸೆ, ನೋವನ್ನು ತಂದ ವಿಚಾರವೆಂದರೆ ಬೆಳಿಗ್ಗೆಯಿಂದ ಹಾವೂ ಮತ್ತು ಮುಂಗೂಸಿಯ ಜಗಳವನ್ನು ಚೆನ್ನಾಗಿ ನಾವು ನೊಡಿದ್ದೇವೆ. ಹಾವು ಮತ್ತು ಮುಂಗೂಸಿ ಜಗಳಕ್ಕೆ ಹೆಚ್ಚಿನ ಪ್ರಾಶಸ್ತ್ಯ ಇಲ್ಲಿ ಸಿಗುತ್ತದೆ; ಆದರೆ ರೈತರ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಹೆಚ್ಚಿನ ಅವಕಾಶವಾಗಲಿ, ಪ್ರಾಶಸ್ತ್ಯವಾಗಲಿ ಸಿಗುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ರೈತನ ಪರಿಸ್ಥಿತಿ ಏನಾಗಿದೆ ಎನ್ನುವುದಕ್ಕೆ ನನ್ನ ಹತ್ತಿರ ಈ ಅಧಿಕೃತವಾದ ಅಂಕಿಅಂಶಗಳು ಇವೆ. ಅಗ್ರಿಕಲ್ಚರ್ ಮಾರ್ಕೆಟಿಂಗ್ ಡೈರೆಕ್ಟರ್ ಅವರಿಂದ ತರಿಸಿರತಕ್ಕಂಥ ಮಾಹಿತಿ ಇದೆ. ಇವತ್ತು ರೈತ ನೂರೆಂಟು

ಕಷ್ಟಗಳ ಮಧ್ಯದಲ್ಲಿ ಸಿಕ್ಕಿದ್ದಾನೆ. ಅವನು ಬೆಳೆದಂತೆ ಉತ್ಪನ್ನಗಳ ಬೆಲೆ ಯಾವ ರೀತಿ ಕುಸಿದು ನೆಲಕಚ್ಚುತ್ತಾ ಇದ್ದಾನೆಂದರೆ ಕೆಲವು ಉತ್ಪನ್ನಗಳ ಬೆಲೆಗಳ ವಿವರ ನನ್ನ ಮುಂದೆ ಇದೆ. ಇಡೀ ರಾಜ್ಯದ ಅಂಕಿಅಂಶಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. 1990-91ರಲ್ಲಿ 5 ಲಕ್ಷ 11 ಸಾವಿರ 771 ಕ್ವಿಂಟಾಲ್ ಅಕ್ಕಿ ನಮ್ಮ ರಾಜ್ಯದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಸರಬರಾಜಾಗಿದೆ. ಅದರ ಬೆಲೆ ಎಷ್ಟಿತ್ತು ಎಂದರೆ 659 ರೂಪಾಯಿ ಇತ್ತು. ಇದು ಸಾಮಾನ್ಯ ದರ್ಜೆಯ ಅಕ್ಕಿಯಬೆಲೆ. 1991-92ರಲ್ಲಿ, 5,45,777 ಕ್ವಿಂಟಾಲ್ ಅಕ್ಕಿ ಮಾರ್ಕೆಟ್ಟಿಗೆ ಬಂದಿದೆ. ಆಗ ಬೆಲೆ ಎಷ್ಟು ಅಂದರೆ 506 ರೂಪಾಯಿಗಳು. ಒಂದು ಕ್ವಿಂಟಾಲ್ ಸಾಮಾನ್ಯದರ್ಜೆಯ ಅಕ್ಕಿಯಬೆಲೆ, 506 ರೂಪಾಯಿ ಅಂದರೆ 1990-91ರಲ್ಲಿ 659 ರೂ ಕ್ವಿಂಟಾಲ್ ಬೆಲೆ ಇದ್ದಂಥ ಅಕ್ಕಿ 1991-92ಕ್ಕೆ 506ಕ್ಕೆ ಇಳಿಯುತ್ತದೆ. ಈ ವರ್ಷದ ಜನವರಿ ತಿಂಗಳಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಸ್‌ಗೆ ಎಷ್ಟು ಅಕ್ಕಿ ಸರಬರಾಜಾಗಿದೆ ಎಂದರೆ 2,95,972 ಕ್ವಿಂಟಾಲ್. 558 ರೂಪಾಯಿಗೆ ಇಳಿದಿದೆ. 1991-92ರಲ್ಲಿ 659 ರೂಪಾಯಿಗಳು ಒಂದು ಕ್ವಿಂಟಾಲ್‌ಗೆ ಇದ್ದಂಥ ಅಕ್ಕಿ ಇವತ್ತು ಕೇವಲ ಅದು 558ಕ್ಕೆ ಇಳಿದಿದೆ. ಅಂದರೆ ಕಳೆದ ಎರಡು ವರ್ಷಗಳ ಬೆಲೆಗೆ ನಾವು ಹೋಲಿಸಿದಾಗ, ಇವತ್ತು ಕಡಿಮೆಯಾಗಿರತಕ್ಕಂಥದ್ದು ಇಲ್ಲಿ ಗೊತ್ತಾಗುತ್ತದೆ. ಅದೇ ರೀತಿ ಮಾನ್ಯ ಅಧ್ಯಕ್ಷರೇ, ಬೆಂಗಾಲ್‌ಗ್ರಾಮ, ಅಂದರೆ ಇದನ್ನು ಹಸಿರು ಎಂದು ಕರೆಯುತ್ತೇವೆ. 1991-92ರಲ್ಲಿ 27,294 ಕ್ವಿಂಟಾಲ್ ಮಾರ್ಕೆಟ್ಟಿಗೆ ಬಂದಿದೆ. ಅದರ ಬೆಲೆ ಪ್ರತಿ ಕ್ವಿಂಟಾಲ್‌ಗೆ 764 ರೂಪಾಯಿ ಇತ್ತು. ಅದು 1 991-92ರಲ್ಲಿ 23,993 ಕ್ವಿಂಟಾಲ್ ಮಾರ್ಕೆಟ್ಟಿಗೆ ಬಂದಿದೆ. ಬೆಲೆ 764 ರೂಪಾಯಿಗಳಿಂದ 741 ರೂಪಾಯಿಗಳಿಗೆ ಇಳಿದಿದೆ. ಇಂದಿನ ಬೆಲೆ ಇನ್ನೂ ಕುಸಿದು 722 ರೂಪಾಯಿಗೆ ಇಳಿದಿದೆ. ಅದೇ ರೀತಿ ರೈತರು ಉತ್ಪನ್ನ ಮಾಡತಕ್ಕ ಎಲ್ಲಾ ವಸ್ತುಗಳ ಬೆಲೆ ಇಳಿದಿದೆ. ಎಲ್ಲವನ್ನೂ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅತಿ ಮುಖ್ಯವಾಗಿ ಸಕ್ಕರೆ ಆದಮೇಲೆ ಬೆಲ್ಲ ಹೆಚ್ಚಿಗೆ ಉತ್ಪಾದನೆಯಾಗುತ್ತಿದೆ. 1990-91ರಲ್ಲಿ 2,78,328 ಕ್ವಿಂಟಾಲ್ ಬೆಲ್ಲ ಮಾರುಕಟ್ಟೆಗೆ ಬಂದಿತ್ತು. ಆವತ್ತು ಬೆಲ್ಲದ ಬೆಲೆ ಒಂದು ಕ್ವಿಂಟಾಲಲ್ 573 ರೂಪಾಯಿ ಇತ್ತು. 91-92ರಲ್ಲಿ 3,14,519 ಕ್ವಿಂಟಾಲ್ ಬೆಲ್ಲ ಮಾರುಕಟ್ಟೆಗೆ ಬಂದಿತ್ತು. ಬೆಲೆ 573 ರಿಂದ 410 ರೂಪಾಯಿಗೆ ಇಳಿದಿದೆ. ಇವತ್ತು ಬೆಲೆ 550 ರೂಪಾಯಿಗೆ ಇಳಿದಿದೆ. ಅಂದರೆ 1990-91ರಲ್ಲಿ 573 ರೂಪಾಯಿ ಇದ್ದದ್ದು ಇವತ್ತು 550ಕ್ಕೆ ಇಳಿದಿದೆ. ಅದೇ ರೀತಿಯಲ್ಲಿ ಕೆಲವು ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ಸರ್ಕಾರ ನಿಗದಿ ಮಾಡಿದೆ. ಈ ಬೆಂಬಲ ಬೆಲೆಯಿಂದ ರೈತನಿಗೆ ಎಷ್ಟರಮಟ್ಟಿಗೆ ಅನುಕೂಲವಾಗುತ್ತಿದೆ ಅಥವಾ ಏನಾಗುತ್ತಿದೆ ಎಂಬುದಕ್ಕೆ ನನ್ನಲ್ಲಿ ಅಂಕಿ ಅಂಶ ಇದೆ. ಮೊದಲಿಗೆ ಭತ್ತವನ್ನು ತೆಗೆದುಕೊಂಡರೆ ಮಧ್ಯಮ ದರ್ಜೆಯ ಭತ್ತಕ್ಕೆ ಬೆಂಬಲ ಬೆಲೆ 92-93ರಲ್ಲಿ 280 ರೂಪಾಯಿ ಇದ್ದರೆ ಮಾರುಕಟ್ಟೆಯಲ್ಲಿ ಸಹ 280 ರೂಪಾಯಿಗಳಿತ್ತು. ಜೋಳದ ಬೆಂಬಲ ಬೆಲೆ 240 ರೂಪಾಯಿ ಇದ್ದರೆ, ಮಾರುಕಟ್ಟೆಯಲ್ಲಿ ಕೇವಲ 2 ರೂಪಾಯಿ ಮಾತ್ರ ಜಾಸ್ತಿ ಇರತಕ್ಕದ್ದು. ನಮ್ಮಲ್ಲಿ ರಾಗಿ, ಭತ್ತ ಮತ್ತು ಕಬ್ಬು ಆದಮೇಲೆ ಪ್ರಮುಖವಾದ ವಾಣಿಜ್ಯ ಬೆಳೆ ಅಂದರೆ ಹತ್ತಿ. ಹತ್ತಿ ಬೆಲೆ ಏನಾಗಿದೆ ಎಂದರೆ 1990-91ರಲ್ಲಿ 1575 ಇದ್ದ ಜಯನಗರ ಹತ್ತಿ ಬೆಲೆ ಇವತ್ತು ಸರ್ಕಾರದ ಅಂಕಿಅಂಶಗಳ ಪ್ರಕಾರ